**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 72/2021
ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀ ಫಕೀರಪ್ಪ ದ್ಯಾಮಣ್ಣ ಹಲಗಲಿ
ತಂದೆಯ ಹೆಸರು : ಶ್ರೀ ದ್ಯಾಮಣ್ಣ ಹಲಗಲಿ
ವಯಸ್ಸು : 67 ವರ್ಷ
ಉದ್ಯೋಗ : ಒಕ್ಕಲುತನ
ವಾಸ್ತವ್ಯ : ಆಲದಕಟ್ಟಿ
ದಿನಾಂಕ : 19-12-2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ 4 ಪುಂಡಲಿಕ ನನ್ನ ಮಗ. ಚಾಸಾ 5 ದೊಡ್ಡವ್ವ ನನ್ನ ತಾಯಿ. ಚಾಸಾ 6 ರಿಂದ 9 ಪರಿಚಯದವರು. ಚಾಸಾ 10 ನನ್ನ ಸೊಸೆ. ನ್ಯಾಯಾಲಯದ ಮುಂದಿರುವ 1 ಮತ್ತು 3 ನೇ ಆರೋಪಿಗಳು ಪರಿಚಯ. ಮಾಧವಾನಂದ ದೇವಸ್ಥಾನದ ಹತ್ತಿರ ವಿನೋದ ಇತನು ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಾನೆ. ಈಗ ಒಂದು ತಿಂಗಳ ಕಡೆಗೆ 3 ವರ್ಷಗಳ ಹಿಂದೆ ನನ್ನ ಮಗ ಪುಂಡಲಿಕ ಇತನು 1 ನೇ ಆರೋಪಿಯ ಕಿರಾಣಿ ಅಂಗಡಿಗೆ ತಿಂಡಿ ತರಲು ಹೋಗಿದ್ದು, ಆಗ ನಾನು ಶಂಕರಪ್ಪ ಬೈಲಹೊಂಗಲರವರ ಚಹಾದ ಅಂಗಡಿಯ ಹತ್ತಿರ ಇದ್ದೇನು, ಆಗ ಸಮಯ ಬೆಳಗ್ಗೆ 10.00 ಗಂಟೆ ಆಗಿತ್ತು, ಆಗ ನನ್ನ ಮಗ ಕಿರಾಣಿ ಅಂಗಡಿಗೆ ಹೋಗಿ ಪೇಡೆ ತರಲು ಹೋಗಿದ್ದು, ಆಗ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿತರ ಪೈಕಿ ಎಡಗಡೆ ನಿಂತಿರುವ ವ್ಯಕ್ತಿಯೇ ಪೇಡೆ ಕೊಟ್ಟಿದ್ದಾಗಿ, ಆತನ ಹೆಸರು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿದ್ದು, ಸಾಕ್ಷಿ ತೋರಿಸಿದ ವ್ಯಕ್ತಿಯ ಹೆಸರನ್ನು ಕೇಳಲಾಗಿ ವಿನೋದ ಎಂದು ಹೇಳುತ್ತಾನೆ.

2. ನನ್ನ ಮೊಮ್ಮಗನಿಗೆ ಕೊಟ್ಟ ಪೇಡೆ ಇಲಿ ತಿಂದಿದ್ದು ಕಂಡು ಬಂದಿದ್ದು, ಅದನ್ನು ಆ ವ್ಯಕ್ತಿಗೆ ನನ್ನ ಮಗ ಪುಂಡಲಿಕ ತೋರಿಸಿ ಈ ಪೇಡೆಯನ್ನು ಇಲಿ ತಿಂದಿರುತ್ತದೆ, ಬೇರೆ ಕೊಡು ಎಂದು ಕೇಳಿದಾಗ ಆಗ ಹಡಸು ಬ್ಯಾಡನ ಮಗನ ತಂದಿಟ್ಟ ಏನು ಎಂದು ಈಗ ತೋರಿಸಿದ ವ್ಯಕ್ತಿಯು ನನ್ನ ಮಗನಿಗೆ ಬೈದಿದ್ದು, ಆಗ ನನ್ನ ಮಗ ನಿನಗೆ ರೊಕ್ಕ ಕೊಟ್ಟಿರುತ್ತೇನೆ ಇದನ್ನು ತೆಗೆದುಕೊಂಡು ಬೇರೆ ಕೊಡು ಎಂದು ಕೇಳಿದಾಗ ಆಗ ಕಲ್ಲು ತೆಗೆದುಕೊಂಡು ನನ್ನ ಮಗನಿಗೆ ನ್ಯಾಯಾಲಯದ

ಮುಂದಿರುವ 1 ನೇ ಆರೋಪಿ ಹಾಗೂ ಆತನ ತಮ್ಮ ಪ್ರವೀಣ ಹಲ್ಲೆ ಮಾಡಿರುತ್ತಾರೆ.

3. ಈ ದಿನ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಅಕ್ಷಯ ಇತನು ನನ್ನ ಮಗನ ದುಬ್ಬಕ್ಕೆ ಕಲ್ಲಿನಿಂದ ಹೊಡೆದರು ಮತ್ತು ನನ್ನ ಮಗನನ್ನು ಆರೋಪಿಯ ತಾಯಿಯಾದಂತ ಶೋಭಾ ಇವಳು ಹಿಡಿದಿದ್ದಳು, ನನ್ನ ಮಗನ ತಲೆಗೆ, ಬೆನ್ನಿಗೆ ಪಟ್ಟಾಗಿ ತಲೆಯ ಮೇಲೆ, ಮುಖದ ಮೇಲೆ ಮತ್ತು ಮೈಮೇಲೆ ರಕ್ತ ಬರುತ್ತಿತ್ತು. ಅಲ್ಲಿದ್ದಂತ ಜನರು ಜಗಳವನ್ನು ನೋಡಿ ಬಿಡಿಸಿರುತ್ತಾರೆ, ಅವರು ಹೆಸರು ನನಗೆ ಹೇಳಲು ಆಗುವುದಿಲ್ಲ, ಜಗಳ ಬಿಡಿಸಿದ ನಂತರ ಆರೋಪಿತರು ಇದೊಮ್ಮೆ ಆಗಿದೆ ನಿಮ್ಮನ್ನು ಇನ್ನೊಮ್ಮೆ ನೋಡಿಕೊಳ್ಳುತ್ತೇವೆ ಅಂದರು.

4. ನನ್ನ ಮಗನಿಗೆ ಪೆಟ್ಟಾಗಿದ್ದು, ಉಪಚಾರಕ್ಕಾಗಿ ಆತನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ನನ್ನ ಮಗನನ್ನು ಆರೋಪಿತರು ಬಡಿಯುತ್ತಿದ್ದಾಗ ನಾನು ಚಹಾದ ಅಂಗಡಿಯ ಹತ್ತಿರ ಇದ್ದೆ, ಸದರಿ ಚಹಾದ ಅಂಗಡಿಯು ನನ್ನ ಮಗನನ್ನು ಬಡಿಯುತ್ತಿದ್ದ ಕಿರಾಣಿ ಅಂಗಡಿಯಿಂದ ಒಂದು ಪರ್ಲಾಂಗ್ ದೂರದಲ್ಲಿತ್ತು.

5. ಪೋಲಿಸರಿಗೆ ಘಟನೆ ಹಿನ್ನಲೆಯಲ್ಲಿ ಮುರಗೋಡ ಪೋಲೀಸ ಠಾಣೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರಿಗೆ ನಾನು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯಾಗಿದ್ದು, ಅದನ್ನು ನಿಪಿಃ1 ಎಂದು ಗುರುತಿಸಲಾಯಿತು. ಪಿರ್ಯಾದಿಯಲ್ಲಿ ಹೆಬ್ಬಟ್ಟಿನ ಗುರುತು ಇದ್ದ ಕಾರಣ ಅದನ್ನು ನಿಶಾನೆಕರಿಸಿರುವುದಿಲ್ಲ.

6. ಪೋಲಿಸರು ನನ್ನನ್ನು ಮುರಗೋಡ ಪೋಲೀಸ ಠಾಣೆಗೆ ಕರೆಸಿದ್ದು, ನಾನು ಅವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ನಾನು ನನ್ನ ಮಗನ ಬಾಯಿ ಸಪ್ಪಳ ಕೇಳಿ ಆತನನ್ನು ಬಡಿಯುತ್ತಿರುವ ಸ್ಥಳಕ್ಕೆ ಹೋಗಿರುತ್ತೇನೆ ಎನ್ನುವ ವಿಶೇಷ ಸರ್ಕಾರಿ ಅಭಿಯೋಜಕರ ಪ್ರಶ್ನೆಗೆ ಸಾಕ್ಷಿಯು ಹೇಳುವುದೇನೆಂದರೆ ನಂತರ ಹೋಗಿರುತ್ತೇನೆ ಅಷ್ಟರಲ್ಲಿ ಜಗಳ ಮುಗಿದಿತ್ತು ಎಂದು ನುಡಿಯುತ್ತಾರೆ. ಆರೋಪಿತರು ನನ್ನ ಮಗನನ್ನು ಬಡಿದಿದ್ದನನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು, ನನ್ನ ತಾಯಿ ದೊಡ್ಡವ್ವ , ಪರಿಚಯಸ್ಥರಾದ ಫಕೀರವ್ವ ಹಲಗಲಿ, ಫಕೀರವ್ವ ಪರಮೇಶನ್ನವರ, ಮಲಗೌಡರ ಹಾಗೂ ಶಿವಪ್ಪ ಸೇರಿ ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುವುದೇನೆಂದರೆ ನಾವು ಹೋಗುವಷ್ಟರಲ್ಲಿ ಗಲಾಟೆ ಮುಗಿದಿತ್ತು ಎಂದು ಹೇಳುತ್ತಾರೆ. ನನ್ನ ಮಗನಿಗೆ ಹೊಡೆದ ಕಲ್ಲನ್ನು ನೋಡಿರುತ್ತೇನೆ. ನಾನು ಆ ಕಲ್ಲನ್ನು ನೋಡಿದರೆ ಗುರೂತಿಸಬಲ್ಲೆ.

2. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ಎರಡೂ ಕಲ್ಲುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಅವೆರಡು ಕಲ್ಲುಗಳಿಂದ ಹಾಗೂ ಅವುಗಳಲ್ಲದೇ ಇನ್ನೊಂದು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನ್ಯಾಯಾಲಯದ ಮುಂದಿರುವ ಎರಡು ಕಲ್ಲುಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು MO 1 ಮತ್ತು 2 ಎಂದು ಗುರುತಿಸಲಾಯಿತು.

3. ನಾನು ದೂರು ಕೊಟ್ಟು 2 ದಿನಗಳ ನಂತರ ಪೋಲಿಸರು ನಮ್ಮ ಊರಿಗೆ ಬಂದಿದ್ದು, ಅವರಿಗೆ ನಾನು ಹೇಳಿಕೆ ನೀಡಿದಾಗ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ಮಾತ್ರ ಬಡೆದಿರುತ್ತಾರೆ ಇನ್ನಿಬ್ಬರು ಬಡೆದಿರುವುದಿಲ್ಲ ಎಂದು ಹೇಳಿರುವುದಿಲ್ಲ. ಪಿರ್ಯಾದಿಯಲ್ಲಿ ವಿನೋದ, ಪ್ರವೀಣ, ಅಕ್ಷಯ ಮತ್ತು ಶೋಭಾ ಇವರು ಬಡೆದಿರುತ್ತಾರೆ ಎಂದು ಕೊಟ್ಟಿರುತ್ತೇನೆ ಎಂದರೆ ಸರಿ. ಆದರೆ ನನ್ನ ಮರುಹೇಳಿಕೆಯಲ್ಲಿ ವಿನೋದ ಮತ್ತು ಅಕ್ಷಯ ಮಾತ್ರ ಹಲ್ಲೆ ಮಾಡಿರುತ್ತಾರೆ, ಆದರೆ ಪ್ರವೀಣ, ಅವರ ತಾಯಿ ಶೋಭಾ ಅಂಗಡಿಯ ಮುಂದೆ ನಿಂತಿದ್ದರು, ಅವರು ತಂಟೆ ಮಾಡಲು ಬಂದಿರಲಿಲ್ಲ, ತಂಟೆ ಮಾಡುವ ಕಾಲಕ್ಕೆ ಬಿಡ್ರೋ

ಬಿಡ್ರೋ ಎಂದು ಅನ್ನುತ್ತಿದ್ದರು ಎಂದು ಹೇಳಿರುವುದಿಲ್ಲ.

4. ದಿಃ 18.01.2021 ರಂದು ನಾನು ಪೋಲಿಸರ ಮುಂದೆ ಹೇಳಿದ ಮರುಹೇಳಿಕೆಯಲ್ಲಿ ಪ್ರವೀಣ ------------------------------------------------------------ ತಂಟೆ ಬಿಡಿಸಿರುತ್ತೇವೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಆರೋಪಿತರನ್ನು ಗುರುತಿಸಿ ಮರುಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ನಿಪಿಃ2 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂಜಾನೆ ಅವಧಿ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಮಧ್ಯಾಹ್ನ ಅವಧಿಗೆ ಮುಂದುಡಲಾಯಿತು.

**ಸಾಕ್ಷಿಯನ್ನು ಪುನಃ 4.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು: ಆರೋಪಿತನ ಪರ ಶ್ರೀ.ಎ.ಆರ್.ಪಿ ವಕೀಲರಿಂದ**

ಆರೋಪಿತರ ಪರಿ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.